CC-O. In Public Domain. Digitized by eGangotri

ಶ್ರೀ ರಾಘವೇಂದ್ರ

★ ಮಹಿಮಾ ಸ್ತೋತ್ರಗಳು ★



ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

ಚಿಕ್ಕಪೇಟೆ ಬೆಂಗಳೂರು - 53

Sri Vidyabharathi Book Centre, Singeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಘವೇಂದ್ರ ಮಹಿಮಾ ಸ್ತೋತ್ರಗಳು

(ಕನ್ನಡ)

ಮನೋಹರವಿಠಲ, ಭೀಮೇಶವಿಠಲ, ರಘುನಾಥವಿಠಲ
ಹಾಗೂ ಶ್ರೀನಿವಾಸಮೂರ್ತಿ ಅಂಕಿತದ
ದಾಸರ ಸುಂದರ ಪದಗಳ ಸಂಗ್ರಹ

ಸಂಗ್ರಹ:
ಶ್ರೀ ಟಿ. ಎಸ್. ಪದ್ಮನಾಭರಾವ್, ಎಂ.ಎ.,
ಬೆಂಗಳೂರು.

ಟಿ. ಯನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ಬೆಂಗಳೂರು-೫೬೦೦೦೨.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಸೂಚಿಕೆ

ಪುಟ

* ಮನೋಹರ ವಿಠಲರ ಕೃತ
ಕನ್ನಡ ಶ್ರೀ ರಾಘವೇಂದ್ರ ಸ್ತೋತ್ರ ... 4 ರಿಂದ 11

* ಭೀಮೇಶವಿಠಲ, ರಘುನಾಥವಿಠಲ,
ಶ್ರೀನಿವಾಸಮೂರ್ತಿ-ಕೃತ-ಕನ್ನಡ ಸ್ತೋತ್ರಗಳು .... 12 ರಿಂದ 15

ಪ್ರಥಮ ಮುದ್ರಣ : 1988

ಹಕ್ಕುಗಳು ಕಾದಿರಿಸಿವೆ.

ಪದ್ಮ ಪ್ರಿಂಟಿಂಗ್ ಪ್ರೆಸ್
ಬಳೇಪೇಟೆ, ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀಃ ॥

ಮನೋಹರ ವಿಠ್ಠಲರ ಕೃತಿ
ಕರ್ನಾಟಕ ಶ್ರೀ ರಾಘವೇಂದ್ರ ಸ್ತೋತ್ರ

ಕರ್ನಾಟಕ ಹರಿದಾಸ ಪರಂಪರೆಯಲ್ಲಿ ಜಗನ್ನಾಥದಾಸರ ನಂತರದ ಕಾಲದ ಹೊತ್ತಿಗೆ ಅಸಂಖ್ಯಾತ ಕೃತಿಗಳು ಹೊರಬಿದ್ದವು. ಹರಿ-ಗುರು ಸ್ತೋತ್ರ ರೂಪದಲ್ಲಿನ ಈ ರಮ್ಯ ಕೃತಿಗಳಲ್ಲಿ ನಮಗೆ ಇಂದು ಹಲವು ಸಿಗುವುದಿಲ್ಲ. ಒಮ್ಮೆ ಪ್ರಕಟವಾಗಿ ಹತ್ತಾರು ವರ್ಷ ಕಳೆದಿದ್ದರೂ ಅವರ ಪ್ರತಿಗಳು ದುರ್ಲಭವಾಗಿರುತ್ತವೆ. ಇಂತಹ ಪ್ರಾರ್ಥನಾ ರೂಪವಾದ ಪದ್ಯಗಳಲ್ಲಿ ಮನೋಹರ ವಿಠ್ಠಲರ 'ಶ್ರೀಗುರು ರಾಘವೇಂದ್ರ ಪ್ರಾಕೃತ' ಸ್ತೋತ್ರವೂ ಒಂದಾಗಿದೆ. ದಾಸರ ಕಾಲ ಸುಮಾರು 1800 ಎಂದು ಹೇಳಬಹುದು.

ಮನೋಹರ ವಿಠ್ಠಲರು ಜಗನ್ನಾಥದಾಸರ ಶಿಷ್ಯ ಪರಂಪರೆಗೆ ಸೇರಿದವರು. ಇವರ ಬಗ್ಗೆ ಹೆಚ್ಚು ವಿವರಗಳು ತಿಳಿದುಬಂದಿಲ್ಲ. ಇವರ ಹೆಸರು ಬುದ್ದಲದಿನ್ನಿ ನಾರಪ್ಪ ಎಂದು ಮಾತ್ರ ಗೊತ್ತಾಗುತ್ತದೆ. ದಾಸರ ಇತರ ಕೃತಿಗಳು ಮನ್ಮಥ ವಿಲಾಸ, ಶ್ರೀಕೃಷ್ಣ ಜಯಂತಿ, ವರದೇಂದ್ರ ಸಾಹಿತ್ಯಮಾಲೆಯಲ್ಲಿ ಪ್ರಕಟವಾಗಿದೆ. ಅಪ್ಪಣ್ಣಾಚಾರ್ಯರು ರಚಿಸಿದ ಪ್ರಖ್ಯಾತ ಶ್ರೀರಾಘವೇಂದ್ರ ಸ್ತೋತ್ರದ ತದ್ವತ್ ಕನ್ನಡ ಅನುವಾದ 'ಶ್ರೀಗುರು ರಾಘವೇಂದ್ರ ಪ್ರಾಕೃತ ಸ್ತೋತ್ರ'. ಈ ಸ್ತೋತ್ರ ವಾರ್ಧಕ ಹಾಗೂ ಭಾಮಿನಿ ಷಟ್ಪದಿಗಳ ಸುಂದರಕಾವ್ಯಬಂಧದಲ್ಲಿದ್ದು ಹಾಡಲು ತುಂಬಾ ಅನುಕೂಲವಾಗಿದೆ.

....೦....

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀಗುರುಭ್ಯೋ ನಮಃ ॥

(ವಾರ್ಥಕ ಷಟ್ಪದಿ)

1. ಶ್ರೀ ಜನಕಜಾರಮಣನಂತ ಭಾಸ್ಕರ ಸೋಮ ।
ತೇಜರಾಜೀವ ಭವಭಯವಿನುತ ಭಕ್ತಸುರ–
ಭೂಜ ಸದ್ಗುಣಸಾಂದ್ರ ರವಿಕುಲಾಂಬುಧಿಚಂದ್ರ
ರಾಜೇಂದ್ರ ರಾಘವೇಂದ್ರಾ ॥
ರಾಜಿಸುವ ತವನಾಮಧರಿಸಿ ಪೂಜಿಸುವ ಗುರು–
ರಾಜ ಮಂತ್ರಾಲಯ ನಿವಾಸನಮಲ ಸ್ತೋತ್ರ
ರಾಜಿಯೇಂ ವಿರಚಿಸುವೆ ಕನ್ನಡದಿ ಸನ್ಮತಿಗೆ
ಮಂಗಳವನಿತ್ತು ಸಲಹೋ ॥

2. ಶ್ರೀ ಪೂರ್ಣಬೋಧ ಗುರುತೀರ್ಥ ಸುಪಯೋನಿಧಿಯ ।
ತಾ ಪಾರಗಂಡು ಸ್ಮರರಿಪುದೂಕ್ಷವಿಷಮಾಂಬಕಾ
ಪಿನಾಕಿಯ ಶಿರವಸಾರಿ ಪೂರ್ವೋತ್ತರದ ಸಿದ್ಧಾಂತವೆಂಬೂರ್ಮಿಯಾ ॥
ಆ ಪರಮಹಂಸಚಾರದಿ ದೇವಾಳಿಯಿಂ
ಮಹಾಪೂಜೆಯಿಂದ ಸೇವಿತನಾದ ಪರಮಾತ್ಮನಾ
ಪಾವಪದ್ಮಗಳ ರಜವನ್ನು ಪ್ರಕ್ಷಾಲನಂ ಗೆಯ್ಗು ಲಗ್ನವಾಗೀ ॥

3. ಜೀವೇಶಭೇದ ಗುಣಪೂರ್ಣತ್ವ ನೀಚೋಚ್ಚ–
ಭಾವದಿ ಜಗತ್ಸತ್ಯವೆಂಬ ಪ್ರಮುಖನಕ್ರಾವಳಿ
ಸವೇತದಿಂ ದುರ್ವಾದಿಕುಲಬಸ್ತಗಳನುಂಗಿ ಜೀರ್ಣಗೈದಾ ॥
ಭೂವಲಯಕೆಲ್ಲ ಗುರುರಾಘವೇಂದ್ರಾರ್ಯವಾಗ್–
ದೇವನದಿ ಸರ್ವದಾ ಭಕ್ತರಘಮಂ ಕಳೆದು
ಪಾವನಂ ಗೆಯ್ದು ತಾಪತ್ರಯದ ಶಾಂತಿಯಂ ಮಾಡಿ
ನಿರ್ಮಲನೆಸಗಲಿ॥

Sri Vidyabharathi Book Centre, Sringeri

CC-O. In Public Domain. Digitized by eGangotri

4. ಪರಿಪೂರ್ಣಕಾಂತಿಯಿಂ ಬುಧಗೆ ಗುರುಜನಕನಾ–
ಗಿರುವ ಶಶಿಗುದಿಸಲಾಸ್ಪದ ಕ್ಷೀರಶರಧಿಯೊಳು ।
ನೆರೆದು ಮೂರಾರಿ ಜ್ವಾನಾಕ್ಷ ಮುಕ್ಕಣನ ಜಟಾಮುಕುಟಮಂ ಚುಂಬಿಸಿ॥
ಚರಿಪ ಹಂಸಗಳು ಪೂರ್ವೋತ್ತರ ತರಂಗಗಳ ।
ನೆರವಿನಿಂ ದೇವಾಲಿಯಿಂದ ಸೇವಿತವಾದ ।
ಪರಮಾತ್ಮನಂಘ್ರಿಕಮಲದೊಳುದಿಸಿ ಪ್ರಕ್ಷಾಲನಂ ಗೆಯ್ಯು ಲಗ್ನವಾಗಿ॥

5. ಚರಿಪ ಜೀವಶ್ರೇಷ್ಠ ಭೇದನಂಗೆಯ್ದು ಗುಣ–
ಭರಿತ ಸತ್ವದ ಕಿರಿದು ಹಿರಿದಾದ ನಕ್ಕಗಳು ।
ಕುರವದಿಂ ಸಂಚರಿಪಜಾಪತಿಗಳಂ ನುಂಗಿ ಭೋರ್ಗರೆದು ತ್ರಿಪಥದಲ್ಲಿ ।
ಪರಿದು ಪಾವನಗೆಯ್ದು ಗುರುರಾಘವೇಂದ್ರವಾಕ್
ಸುರತರಂಗಿಣಿ ಶರಣರನುತಾಪ ಪರಿಹರಿಸಿ
ಶರಣುಸುಧೆಯನ್ನೆಸಗಿ ಜನ್ಮಾಂತರದ ದೋಷಮಂ ಕಳೆದು
ನಿರ್ಮಲಗೈಯಲಿ ॥

(ಭಾಮಿನಿ ಷಟ್ಪದಿ)

6. ಯತಿವರ ಶ್ರೀ ರಾಘವೇಂದ್ರನೆ ಸತತ ಸಕಲೇಷ್ಟ ಪ್ರದಾಯಕ।
ನುತಿಸಿ ತವಪದಕಂಜಯುಗದಲಿ ಭಕುತಿಮಾಳ್ಪವರಾ ॥
ಅತಿಶಯದ ದೋಕ್ಷಾಘ ಪರ್ವತ
ತತಿಯ ತರಿದೈ ದೃಷ್ಟಿವಜ್ರದಿ ಕ್ಷಿತಿಸುರೇಂದ್ರನೆ
ಪೇರ್ಮೆಯಿಂದೆನ್ನ ನವರತ ಸಲಹೈ ॥

7. ಹರಿಯ ಪದಪಂಕಜವ ಭಜಿಸಲು
ದೊರೆವುದೈ ನಿನಗಖಿಳ ಸಂಪದ
ಗುರುವೆ ನೀದೇನ ಸ್ವಭಾವನದು ದಿಟ ಸುರದ್ರುವದಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತೆರದೊಳೆನ್ನಯ ಮನದಭೀಷ್ಟೆಯ
ಕರುಣಿಸುವ ದಾತಾರನಾಗುತ ।
ಪೊರೆದಪುದು ಶ್ರೀರಾಘವೇಂದ್ರನೆ ಸುಗುಣಮಂದಿರನೆ ॥

8. ಮೌನಿಮಣಿ ಭವ್ಯಸ್ವರೂಪನೆ । ದೀನಜನಭವದುಃಖತೂಲ ವಿ ।
ತಾನಕಗ್ನಿಯ ಸಮನೆ ದುಸ್ತರವಾದುಪದ್ರವದಾ । ಹಾನಿಶರಧಿಗೆ
ಸೇತುವೆನಿಸುತ । ಹೀನದುಷ್ಪ್ರಗ್ರಹಸುನಿಗ್ರಹ । ನೀನಲಾ ಸುಖಧೈರ್ಯ
ಶಾಲಿಯು ಪಾಲಿಸುವುದೆಮ್ಮಾ ॥

9. ದೋಷರಹಿತನವದ್ಯ ನಿರ್ಮಲ । ವೇಷನೇ ಪ್ರಾರ್ಥಿಸುವೆ ಜನರಭಿ।ಲಾಷೆ
ಸಲಿಸುತ ಮೂಕರಿಂಗೆ ಸುಭಾಷೆ ಕರುಣಿಸುತ॥ ಶೇಷ ವಿದ್ವಜ್ಜನ ಮಹಾ।
ವಿಶೇಷ ಗುಣಸ್ತುತಿಸುವರು ಮಂಗಳ । ಶೇಷನಂ ಸೋಲಿಸುವ ವಚನ–
ವಿಲಾಸಕಭಿನಮಿಪೆ ॥

10. ಸಕಲಸಂಪದ್ಭಕ್ತಿ ಸಂತತ।ಸುಕಲ ವಾಗ್ದೇಹದ ಸುಪಾಟವ । ಭಕುತರಿಗೆ
ವಿಜ್ಞಾನ ಸುಮ್ಮಾನಾದಿಗಳನಿತ್ತು ॥ ವಿಕಳಮತಿ ಕಾಯಜದಖಿಳ ।
ಪಾತಕವ ತರಿವ್ರತ ಸಲಹೊ ಗುರುಗಳ । ಮುಕುಟಮಣಿ ಶ್ರೀರಾಘ–
ವೇಂದ್ರನೆ ಲೋಕಸುಂದರನೆ ॥

(ವಾರ್ಧಕ ಷಟ್ಪದಿ)

11. ಆವವನು ಪಾದೋದಕವ ಶಿರದಿಧರಿಸಿದರೆ । ದೇವಗಂಗಾದ್ಯಖಿಲ
ಮುಖ್ಯನದಿಗಳಲಿ । ಸದ್ಭಾವದಿಂ ಸ್ನಾನದಾನಂಗಳೆಸಗಿದ ಪುಣ್ಯಮಿತ
ಪುಣ್ಯ ದಿಟದೊರೆವುದು ॥ ಆ ವ್ಯಂಗಸ್ವಾಂಗಸಮೃದ್ಧಿಯಾಗಿ ತಾಪ ।
ಪಾಪಾವಲಿಗ್ರಹನಾಶ ಬಂಜೆ ಸುತರಂ ಪಡೆವ।ಳೀ ಪೇಳ್ವೆ ಶ್ರೀರಾಘವೇಂದ್ರ
ಗುರುಗಳ ಮಹಿಮೆ ಪೊಗಳುತಾಶ್ರೈಸಿ ಭಜಿಪೆ ॥

Sri Vidyabharathi Book Centre, Sringeri

CC-O. In Public Domain. Digitized by eGangotri

12. ಆವವನ ಪದಕಂಜರಜದಿ ತನುಭೂಷಿತನೊ। ಆವನಡಿದಾವರೆಯೊಳಲಿ-
ಯಂತೆ ಮನವಿಹುದೊ । ಆವವನ ಚರಣಾಬ್ಜಕೀರ್ತನೆಗಳಿಂ ವಚನ
ಪರಿಪಕ್ವಮಾಗಿಹದೊ ॥ ಈ ವಿಧದೊಳಿಪ್ಪವನ ಸಂದರ್ಶನಂಗೈಯೆ ।
ದಾವ ಸಮವಲ್ಲವೆಂದುರಿತಕಾನನಕಿನ್ನು ।ದೇವಾಂಶ ಗುರುಗಳಂ ಪ್ರತ್ಯಕ್ಷ
ಭಜಿಸುವವನ ಬಣ್ಣಿಸಲಾರ್ ಜಗದೊಳು ॥

13. ಧರೆಯೊಳಗೆ ವಿಜಯೀಂದ್ರ ಕರಕಮಲ ಸಂಜಾತ। ಗುರು ಸುಧೀಂದ್ರಾ-
ರ್ಯರಾ ವರಪುತ್ರರಾದ ಯತಿ ।ವರ ರಾಘವೇಂದ್ರನೆಂಬಭಿಧಾನದಿಂ ಕರೆಸಿ
ಶ್ರೀಮಧ್ವಮತ ಪೆರ್ಚಿಸಿ ॥ ಬಿರಿದು ಪಸರಿಸಿ ಸರ್ವತಂತ್ರ ಸ್ವತಂತ್ರರೆನೆ ।
ಮೆರೆದ ಮಹಿಮನೆ ಪುತ್ರಸಂಪತ್ಕಳತ್ರಯಶ । ಪರಮಾಯುಜ್ಞಾನ
ಸದ್ಭಕ್ತಿ ಪುಣ್ಯಗಳಿತ್ತು ಹರಸಿ ನೀ ಸಲಹೊ ಎನ್ನ ॥

(ಭಾಮಿನೀ ಷಟ್ಪದಿ)

14. ವಾದಿಗಳ ಜಯಶೀಲದಲಿ ಪ್ರತಿ । ವಾದಿಗಳ ಸ್ವಾಂತ ಪ್ರಭೇದನ ।
ಗೆಯ್ದು ಚಂಚಲಮಾಳ್ಪ ಚಿನ್ಹಿಗೆ ಎರಡರಲಿ ಸತತ ॥ ಆದರವು ಗುರು
ರಾಘವೇಂದ್ರಗೆ । ಮೇದಿನಿಯೊಳನ್ಯೋರ್ವರೋರ್ವರು । ಬೋಧಸರ್ವ
ಸುವಿದ್ಯ ಕುಶಲೋನ್ನತಿ ಸುಗುಣದಲ್ಲಿ ॥

15. ಶ್ರೀಶನಪರೋಕ್ಷೀಕರಿಸಿ ಸಂ । ನ್ಯಾಸವಿಷಯದಿ ಮಾಡಿ ಕಾಮನ ।
ಪೂಶರವ್ರಪೇಕ್ಷಿಸಿ ಜರಿದು ದೇಹಾರಿ ಮುಮತೆಯನು॥ಭೂಸುರೋತ್ತಮರಿಂ
ಗಪೇಕ್ಷಿತ । ರಾತಿಫಲಗಳನೀವನಿಗೆ ಸಮ । ವೀಶರಧಿ ಮೇಖಲೆಯೊಳಿಲ್ಲವೊ
ರಾಘವೇಂದ್ರಂಗೆ ॥

16. ಸದ್ವಯಾದಾಕ್ಷಿಣ್ಯ ವಿಷಯದಿ।ಹೊದ್ದದಿಹ ವೈರಾಗ್ಯಭಾಗ್ಯ ಸು।ಬುದ್ಧಿ
ವಾಕ್ಪಾಟವ ಮುಖಾಂಕಿತ ಸದ್ಗುಣಗಳಲ್ಲಿ ॥ ಸಿದ್ಧಿಶಾಪಾನುಗ್ರಹದ ಪ್ರ।
ಸಿದ್ಧ ಶಕ್ತಿಗಳಿಂದ ಶೋಭಿಸು । ತಿದ್ದ ಶ್ರೀಗುರು ರಾಘವೇಂದ್ರರಿಗಿಲ್ಲ
ಸಮನೋರ್ವ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ವಾರ್ಧಕ ಷಟ್ಪದಿ)

17. ಕಪಟಕುಟಿಲಜ್ಞಾನ ವಿಸ್ಮೃತಿ ಭ್ರಾಂತಿಕ್ಷಯಪಸ್ಮಾರ ತಂದ್ರ ಸಂಶಯ
ವಚಃಕೌಂಠ್ಯಬಾಧಿಪ ಕಂಪನಾದಿ ಪ್ರಮುಖೇಂದ್ರಿಯಗಳಿಂದುದಿದಿಸಿದತಿ
ದೋಷಸಂಘವೆಲ್ಲ ॥ ಅಪರಿಮಿತ ಮಹಿಮ ಶ್ರೀರಾಘವೇಂದ್ರನೆ ನಿನ್ನ ।
ಕೃಪೆಯಾಗಲವು ನಾಶವಾಗದಿರ್ದಪನೆ ರಾ । ಜಿಪ ದಿವ್ಯ ಸಾಕ್ಷಾತ್
ಸ್ವರೂಪಮಂ ಕಂಡವಗೆ ದುರಿತದಟ್ಟಳಿಯೆ ತಿಳಿಯೆ ॥

18. 'ಶ್ರೀರಾಘವೇಂದ್ರಾಯ ನಮಃ' ಎಂಬ ದಿವ್ಯಾಷ್ಟ।ಸಾರಾಕ್ಷರದ ಮಂತ್ರದಿಂ
ನಿತ್ಯ ಭಕ್ತಿಯಿಂ । ದಾರಾಧಿಸುತ ಜಪಿಸಿದವರಿಗಿಷ್ಟಾರ್ಥ ಕೈಸೇರುವುದು
ನಿಸ್ಸಂಶಯಾ॥ಚಾರುತರ ಕೀರ್ತಿಯಿಂ ಶ್ರೀ ಮಧ್ವಮತಕ್ಷೀರ। ವಾರಿನಿಧಿ
ಚಂದ್ರನೊಳ್ ಪೆರ್ಚಿಸುತ ಲೋಕದೊಳು । ಸಾರಿಸಿದೆ ನಿರ್ದೋಷಗಮ್ಯ
ಮಹಿಮನೆ ರಾಘವೇಂದ್ರ ಗುರುಸಾರ್ವಭೌಮಾ॥

19. ತನ್ನ ಕಾಯಜದೋಷಯಾತ್ಮವಾತ್ಮೀಯಭವ।ಘನ್ನ ಪಾಪಂಗಳಂ ಸರ್ವ
ದುರಿತಂಗಳಂ ।ಚನ್ನಾಗಿ ಪರಿಹರಿಸಿ ಪುರುಷಾರ್ಥಕೊಡುವ ಪರಮಾತ್ಮ-
ವಿದನೀತನೆಂದು ॥ ಮನ್ನಿಸಿ ತ್ರಿಕಾಲದೊಳಜಸ್ರ ಪ್ರಾರ್ಥನೆಗೆಯ್ವ ।
ಧನ್ಯನಾನನೊ ಅವನು ಸರ್ವೇಷ್ಟ ಪಡೆದು ಸುಖ।ವನ್ನೆ ಭೋಗಿಸುವ-
ನಿಪಪರದೊಳಗೆ ಸಂದೇಹವಿಲ್ಲದಕೆ ಸುಗತಿಸಾರ್ವಾ ॥

(ಭಾಮಿನಿ ಷಟ್ಪದಿ)

20. ಸಕಲ ಯಾತ್ರಾಫಲದಗೋಸ್ಕರ ಸುಕಲೆ ವೃಂದಾವನ ಪ್ರದಕ್ಷಿಣೆ ।
ಶಕುತಿಯಿದ್ದಷ್ಟೆಸಗುವೆನು ಸರ್ವೇಷ್ಟಸಿದ್ಧಿಂಗೆ ॥
ಭಕುತಿಯಿಂ ನಮಸ್ಕಾರ ಮಾಳ್ಪೆನು ಮುಕುತಿಶೃತಿಶಾಸ್ತ್ರಾರ್ಥಜ್ಞಾನದ ।
ನಿಕರಕೈಸಾರ್ವುದಕೆ ತವ ಸಂಕೀರ್ತನಂ ಗೆಯ್ವಾ ॥

21. ಭುವನದೊಳಗಿದ್ದ ಜಿಳ ತೀರ್ಥದ ನಿವಹದೊಳು ಮಜ್ಜನವನೆಸಗಿದ ।
ಸವೆಯದತಿಫಲ ದೊರೆವುದಕೆ ವೃಂದಾವನಭಿಷೇಕಾ ॥
ಸ್ತವನದಿಂ ಎಸಗಿರಲು ತಜ್ಜಲ ವವಯದಿ ಶಿರದಲ್ಲಿ ಧರಿಸುವೆ ।
ತವ ಮಾಹಾತ್ಮ್ಯ ನಿಜಿಕ್ಷಣೆ ಗುರುರಾಜ ಸುರಭಕ್ತಿಜಾ ॥

Sri Vidyabharati Book Centre, Sringeri

CC-O. In Public Domain. Digitized by eGangotri

(ವಾರ್ಧಕ ಷಟ್ಪದಿ)

22. ಕಾಮಾದಿಭಂಗ ಸಂಕುಲದಿಂದ ವಿಷಯ ಸುಪ್ರೇಮ ವಿಭ್ರಮದುರ್ಭ್ರಮ-
ಗಳಿಂದ ವದ್ಯಗ್ರಹ ಸ್ತೋಮದಿಂದವಿತಭಯವೆಂಬ ಫೇನಗಳಿಂದ
ಉತ್ಕೃಷ್ಟದುಃಖ ವಿಷಧೀ ॥ ಆ ಮಹಾಕ್ಷಯ ಪ್ರಕೃತಿಬದ್ಧದುಸ್ತರ ಸದಾ ।
ಸೀಮವರ್ಜಿತವಾದಗಾಢ ಸಂಸಾರವೆಂ । ಬೀ ನುಹಾರ್ಣವದೊಳಗೆ
ಮಗ್ನನಾಗಿದ್ದೆನ್ನನುದ್ಧರಿಸೊ ರಾಘವೇಂದ್ರಾ ॥

23. ಶ್ರೀ ರಾಘವೇಂದ್ರ ಗುರು ಸ್ತೋತ್ರಮಂ ಭಕ್ತಿಯಿಂ।ದಾರಾದೊಡಂ ಪಠಿಸಿ
ಜಪಿಸಿದರೆ ಕುಷ್ಠಾದಿ। ಕ್ರೂರರೋಗಗಳಳಿವವತಿತ್ವರ್ಯದಿಂದಂಥ ಜಪಿಸಿ
ದರೆ ದಿವ್ಯದೃಷ್ಟಿ ॥ ಸಾರುವವನಂ ಏಡಮೂಕಾದರುಂ ಸರಿಯೆ ।
ಸಾರಸ್ತೋತ್ರದಿ ಜಪಂಗೆಯ್ಯೆ ವಾಕ್ಪತಿಯಂತೆ। ಚಾರುವಾಚಾಲನಾಗುವ
ಸ್ತುತಿಯ ಪಠಿಸಿದವ ಪೂರ್ಣಾಯು ಸಿರಿತಾಳ್ವನು ॥

24. ಆವನೀಸ್ತೋತ್ರದಿಂದಭಿಮಂತ್ರಿತೋದಕವ। ಭಾವಶುದ್ಧದಿಕುಡಿಯಲವನ
ಕುಕ್ಷಿಯೊಳಿರ್ದಘಾವಳಿಗಳೆಲ್ಲ ತಕ್ಷಣದೊಳಳಿವವು ಯಿನ್ನು ಪೊಳೆವ
ವೃಂದಾವನವನು ॥ ಸೇವಿಸೆ ಪ್ರದಕ್ಷಿಣೆಯ ಪಂಗು ಖಂಜಗಳನಿಬ ।
ರಾವಿಮಲ ಸ್ತೋತ್ರದಿಂದೆಸಗೆ ಜಂಘಾಲಾಗಿ । ತಾವೆ ಚರಿಸುವರು
ಶ್ರೀರಾಘವೇಂದ್ರಾರ್ಯರ ಮಹಾಪ್ರಸಾದವ ಪೊಗಳುತಾ ॥

25. ಸೋಮಸೂರ್ಯಗ್ರಹಣದಲ್ಲಿ ಪುಷ್ಯಾರ್ಕಾದಿ । ರಾಮಣೀಯಕ ಪುಣ್ಯ
ಪರ್ವಣಿ ಸಮಾಗಮದೊ । ಳೀ ಮಹಾದಿವ್ಯ ಸ್ತೋತ್ರವನು ನೂರೆಂಟು
ಬಾರೆ ಜಪಿಸಿದ ಮಾನವನಿಗೆ॥ಚಾಮೂರ ಚೋರಸರ್ಪಗ್ರಹಪಿಶಾಚನೃಪ।
ಸಾಮಜ ಮಕರ ಭೂತಪ್ರೇತಾದಿ ಭಯಪೀಡೆ। ತಾಮಸರುಪದ್ರವೆಂದೆಂದು
ಬಾರದೆ ಪೋಪವೇವೇಳ್ಪೆ ಗುರುಮಹಿಮೆಯಾ ॥

26. ಈ ದಿವ್ಯ ಸ್ತೋತ್ರ ಉಚ್ಚರಿಸುತ್ತ ಮುಖದಿ ಗುರು ।
ಪಾದವಂ ನೆನೆನೆನೆದು ತದ್ವೃಂದಾವನದ ಬಳಿಯೊ ।
ಳಾದರದಿ ದೀಪಸಂಯೋಜನಂ ಗೆಯ್ದರ್ಗೆ ಸುಜ್ಞಾನ ಪುತ್ರಲಾಭಾ ॥

CC-O. In Public Domain. Digitized by eGangotri

ವಾದಿಗಳ ಜಯ ಭಕ್ತಿ ಪರಿಗುರುಗಳಲ್ಲಿ ಪೆರ್ಚಿ ।
ಮೋದತೀರ್ಥರ ಮತವ ಪೊಂದಿದವರಿಗೆ ಸತತ ।
ಭೂದೇವ ಮೌಳಿಮಣಿ ಸಕಲಭೀಷ್ಟೆಯನೀವ ಸಂದೇಹವಿನಿತಿಲ್ಲವು ॥

27. ಆವನತಿ ಭಕ್ತಿಯಿಂ ಗುರು ರಾಘವೇಂದ್ರರಡಿ।ದಾವರೆಯ ಸ್ತೋತ್ರಮಂ ಪಠಿಸುತ್ತ ಸ್ಮರಿಸಲು ಸು। ಖಾವಳಿಯ ಪೊಂದುವನು ಲೇಶ ಕಮಲಾ-ನಾಥನಮಲಪ್ರಸಾದದಿಂದ ॥ ಶ್ರೀ ವಿಭೂತೀಕೀರ್ತಿ ದಿಗ್ವಿಜಯ ಮೊದಲಾದ । ಈ ವಿಶೇಷಾರ್ಥ ಸಮೃದ್ಧಿಯಂ ಪಡೆವುದಕೆ । ದೇವೇಶ ಶ್ರೀಹಯಾಸ್ಯನೆ ಸಾಕ್ಷಿ ನಾನುಡಿವೆ ಕೇಳ್ವುದೆಲ್ಲಾ ಸುಜನರು ॥

ಫಲಶ್ರುತಿ

(ವಾರ್ಧಕ ಷಟ್ಪದಿ)

28. ವೃಂದಾವನದೊಳಿರ್ಪ ಮೃತ್ತಿಕೆಯನನುದಿನದಿ । ತಂದು ಸೇವಿಸಲವನ ಮುಟ್ಟಲರಿಯವು ಪಾಪ । ವೆಂದು ರೋಗಿಷ್ಟ ಸಾಧಿಸುತ ಲೇಪಿಸಿ ಮೆಯ್ಗೆ ಕುಂದಣದ ತೆರನಾಗುವಾ॥ವೃಂದಾರಕರ ಮಣಿಯೊಳೀಪ್ಸಿತವ-ನೀವುದಿನ್ನೆಂತು ಬಣ್ಣಿಸಲಿ ಮುಂತ್ರಾಕ್ಷತೆಯ ಮಹಿಮೆ ನಾ ॥ ಹಿಂದೆ ಮುಂದೆಂದು ಗುರು ರಾಘವೇಂದ್ರಾರ್ಯರಿಗೆ ಸಮವಿಲ್ಲ ಲೋಕದಲ್ಲಿ ॥

29. ಸುರಮಹೀರುಹ ಭಕ್ತಿಯಿಂ ಭಜಿಸುವರ್ಗಮರ । ಸುರಭಿನಮಿಪರ್ಗೆ ವರಸತ್ಯ ಧರ್ಮಾಸಕ್ತ। ಧರೆಯೊಳತಿಪೂಜ್ಯ ಶ್ರೀ ರಾಘವೇಂದ್ರರ ನಾಮ ನಿರ್ವಚನಮಂಪೇಳುವೆ ॥

ಸಿರಿಕಾಂತ ದೊರಕುವುದು 'ಶ್ರೀ' ಯೆನಲು 'ರಾಘ' ಯೆನೆ, ಭರಿತ ಸಾಸಂಗಳಂ 'ದ್ರಾ' ಯೆನಲು ಓಡಿಸುತ । ತ್ವರಿತದಿಂ 'ನೇ' ಎನಲು ವಾಂಛಿತ ಫಲವನೀವ ಗುರುವರ್ಯ ಸೌಗಡಲೊಪ್ಪನೆ ॥

Sri Vidyabharathi Book Centre, Sringeri

CC-O. In Public Domain. Digitized by eGangotri

30. 'ಶ್ರೀ' ಯೆನಲು ಸುಜ್ಞಾನ 'ರಾ' ಯೆನಲು ರಾಜವಶ । 'ಘ' ಎನಲು ಘನಶಕ್ತಿ 'ವೇಂ' ಯೆನಲು ವೇದಾಢ್ಯ । 'ದ್ರಾ' ಎನಲು ದ್ರವ್ಯವಶ 'ಯ' ಯೆನಲು ಯಶಪ್ರಾಪ್ತಿ 'ನ' ಯೆನಲು ನರವಶನಹಾ । 'ಮ' ಯೆನಲು ಮನಸು ಚಂಚಲವಾಗದೀಯೆಂಟು ಬಗೆಯ ದಿವ್ಯಾಕ್ಷರದ ಮಂತ್ರವನು ಭಕ್ತಿಯಿಂ । ಬಾಯೊಳನವರತ 'ಶ್ರೀ ರಾಘವೇಂದ್ರಾಯ ನಮಃ' ಎಂದು ಜಪಿಸುವನೆ ಧನ್ಯಾ ॥

31. ಈ ತೆರದಿಗುರುರಾಘವೇಂದ್ರ ಪ್ರಸಾದದಿಂ।ಪ್ರೀತಿಯಿಂದಪ್ಪಣಾಚಾರ್ಯ-ರೆಂಬಭಿಧಾನಾ । ಖ್ಯಾತರಿಂ ಗೀರ್ವಾಣದಿಂದ ರಚಿಸಿರಲವರ ಭಾವಮುಂ ಕನ್ನಡದಲೀ ॥ ಜ್ಯೋತಿ ಕನ್ನಡಿಯೊಳಗೆ ಮುಖ ಸ್ಪಷ್ಟ ಕಾಣಿಸುವ । ರೀತಿಯಿಂ ಗ್ರಹಿಸಿ ಶ್ರೀ ಮನೋಹರ ವಿಠಲದಾಸ । ಚಾತುರ್ಯದಿಂ ಪೇಳ್ದ ನೆಂದರಿದು ಬರೆದೋದಿ ಕೇಳ್ವುದೆಲ್ಲಾ ಸುಜನರು ॥

॥ಇಂತು ಶ್ರೀ ಮನೋಹರ ವಿಠಲದಾಸಕೃತ ಪ್ರಾಕೃತ
ಶ್ರೀ ರಾಘವೇಂದ್ರ ಸ್ತೋತ್ರಂ ಮುಗಿದುದು॥

॥ಶ್ರೀಕೃಷ್ಣಾರ್ಪಣಮಸ್ತು॥

CC-O. In Public Domain. Digitized by eGangotri

[ಶ್ರೀ ರಾಘವೇಂದ್ರಗುರುಗಳ ಮಹಿಮಾತಿಶಯಗಳನ್ನು ಅನೇಕ ಹರಿದಾಸರು ಹಾಡಿ ಮನದಣಿಯ ಸ್ತುತಿಸಿದ್ದಾರೆ. ಇಂತಹ ಕೃತಿಗಳು ಎಷ್ಟೋ ಪ್ರಕಟವಾಗಿಲ್ಲ. ಈ ಕೆಳಗೆ ಭೀಮೇಶ ವಿಠಲ, ರಘುನಾಥ ವಿಠಲ, ಹಾಗೂ ಶ್ರೀನಿವಾಸಮೂರ್ತಿ- ಯವರ ಕೃತಿಗಳಿವೆ.

—ಸಂ.]

ಹರಿದಾಸರು ಹಾಡಿದ

ಶ್ರೀ ರಾಘವೇಂದ್ರ ಮಹಿಮಾ ಸ್ತೋತ್ರಗಳು

1. ಬೇಡುವೆ ನಿನ್ನ ಕೊಡು ವರವನ್ನ ॥ಪ॥

ಬೇಡುವೆ ಭವತರ ಬೀಡೊಳು ನಿನ್ನ।ಕೊಂಡಾಡುತ ರಥವನು ನೋಡುವ ವಿಭವ ॥ಅ॥

ಜನುಮ ಜನುಮದಲಿ ಅನಿಲ ನಿಗಮಗಳ ಮನನ ಮಾಡುತ ಸಜ್ಜನಕೆರಗುವುದ ॥೧॥

ಇಂದ್ರನ ವಿಭವ ಸುಧೀಂದ್ರ ತನಯ ರಾಘವೇಂದ್ರ ಗುರುವೆ ಕಮಲೇಂದ್ರನ ಕೃಪೆಯ ॥೨॥

ಭೀಮೇಶ ವಿಠಲ ನೊಲಿದವರೊಳು ನೀವರನೆನುತಲಿ ನಿನ್ನ ಚರಣವ ತುತಿಸಿ ॥೩॥

2. ಭವರೋಗ ಹರನೆ ಕೃಪಾಸಾಗರ ಶ್ರೀ ಗುರುರಾಘವೇಂದ್ರ ಪರಿಪಾಲಿಸೋ ॥ಪ॥

ಸಂತತ ಪೂರ್ವಾದಿಧ್ವಾಂತ ದಿವಾಕರ ಸಂತ ವಿನುತ ಮಾತ ಲಾಲಿಸೋ ॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾವನಗಾತ್ರ ಸುದೇವ ವರನೆ ತವ ಸೇವಕ ಜನರೊಳಗಾಡಿಸೊ ।
ಘನ್ನಾ ಮಹಿಮ ರಘುನಾಥ ವಿಠಲಪ್ರಿಯ ನಿನ್ನಾ ರಾಧನೆ ಮಾಡಿಸೋ ॥೨॥

3. ನೋಡೊ ನೋಡೊ ಕೊಂಡಾಡುತ ಪಾಡೋನತಿವರ ಬೇಡೋ
ಶ್ರೀ ಗುರು ರಾಘವೇಂದ್ರರ ॥ಪ॥

ಶ್ರೀಕರ ಪರಮ ಕೃಪಾಕರ ಪ್ರಣತ ರತ್ನಾಕರ ಪೂರ್ಣಸುಚಂದ್ರರ ॥೧॥
ರಾಜವದನ ಹಂಸರಾಜ ತುಶಿನ ಗಜರಾಜ ಛೇದಕ ಸುಮೃಗೇಂದ್ರರ ॥೨॥

ಪಟುತರ ರಘುನಾಥವಿಠಲ ಪಾದಾಂಬುಜ ಷಟ್ಪಾದರಾ ಈ
ನುನೀಂದ್ರರಾ ॥೩॥

4. ಅಂದಿಂದ ನಿನ್ನ ಪಾದ ಸಂದರುಶನ ಬಯಸಿ ಬಂದೆನೊ ಗುರುರಾಯಾ
॥ಪ॥

ಪೊಂದಿದ ನತರಘ ವೃಂದಗಳದು ಆನಂದ ನೀಡುವ ದಯಶಿಂಧುವೆಂದು
ಕೇಳ ॥೧॥

ಶ್ರೀಯರಸ ಪರನೆಂದು ಸಾಧಿಸಿ ಹಿಂದೆ ಹೇಯ ದೈತ್ಯನ ಕೊಲ್ಲಿಸಿ
ಭೂಮಿಯ ಸುರರಿಗತಿಸುಖವ ನೀಡಿದ ಮಹರಾಯ ನೀ ಪ್ರಹ್ಲಾದರಾಯ
ನೆಂಬುದ ಕೇಳ ॥೧॥

ವರನ್ಯಾಯಾಮೃತ ತರ್ಕತಾಂಡವ ಚಂದ್ರಿಕಾದ್ಯುರುಗ್ರಂಥಗಳ ರಚಿಸಿ।
ದುರುವಾದಿಗಳ ಗೆದ್ದೂ ಜಯ ಪತ್ರಿಕೆಯ ಯದುಪತಿಗರ್ಪಿಸಿದ ವ್ಯಾಸಮುನಿ
ನೀನೆಂಬುದ ಕೇಳ ॥೨॥

ಸಂತತ ಶ್ರೀ ತುಂಗಾ ತೀರೋಲ್ಲಸಿತ ಸನ್ಮಂತ್ರಸಿದ್ಧಿಯ ಕ್ಷೇತ್ರದಿ ನಿಂತು
ಶ್ರೀ ರಘುನಾಥ ವಿಠಲನ ತುತಿಪ ಸುಶಾಂತ ಶ್ರೀ ರಾಘವೇಂದ್ರ ಗುರುವೆ
ಪಾಲಿಸು ಎಂದು ॥೩॥

CC-O. In Public Domain. Digitized by eGangotri

5. ರಾಜಸುರೋತ್ತಮ ಮಾವಮವಭೋ । ರಾಘವೇಂದ್ರ ಗುರು ॥ಪ॥

ರಾಜವದನ ರಘುರಾಮನ ನಾಮ ವಿರಾಜಿತಾಂಘ್ರಿ ಸುಸರೋಜ ಮಧುಪಗುರು ॥ಅ॥

ಸ್ಫಟಿಕ ಕನಕಸಮ ಪರಮ ಮಹಿತ ಶುಭಗಾತ್ರಾ ಧೀರಾ ಸುಂದರ ಸುದಯಾ ಪೂರಿತ ನೀರಜ ನೇತ್ರ ಶತಜನಗಹನ ಕುಠಾರಕವಿನುತ ಪಾದಾರವಿಂದ ಪ್ರಹ್ಲಾದರೂಪ ಗುರು ॥೧॥

ಭವಭಯಕ್ಷಯ ಮುಖ ರೋಗೋತ್ಕಟ ಗಿರಿಕುಲಿಶಧೀಶ ಭೋ ಮಧ್ವ ಮತಾಂಬೋನಿಧಿ ಪೂರ್ಣಸುಚಂದ್ರ ರವಿನಿಭ ಪರತರ ವ್ಯಾಸತ್ರಯ ಕೃತ ರಾಜವ್ಯಾಸ ಮುನಿರೂಪ ಪರಮಗುರು ॥೨॥

ವರದ್ವಿಷಡೋರ್ಧ್ವಸುಪುಂಡ್ರ ಮುದ್ರಾಂಕಿತ ಕಾಯಾ-ಗೇಯಾ ವಿಪ್ರಾರ್ಚಿತ ಶ್ರೀ ತುಳಸೀ ಸ್ರಗ್ಧೃತಕಂಠಾ।ವರವಿಜಯೀಂದ್ರ ಕರಾಂಭೋಜೋತ್ಥ ಸುಧೀಂದ್ರವರ್ಯಸುಕುಮಾರ ವ್ರತಿಪಗುರು ॥೩॥

ದುರಿತ ತಿಮಿರ ಖರ ಕಿರಣಾರುಣ ನಿಭ ಜೀಲಾಭಾಸಾ ದಂಡ ಕಮಂಡಲು ಮಂಡಿತ ಸುಕರಾಂಭೋಜ ವರ ಶುಭಕರ ತುಂಗಾತಟಗತ ಶ್ರೀ ಸನ್ಮಂತ್ರಾಲಯ ಸುಕೃತಾಲಯ ಗುರು ॥೪॥

ನಿಜ ವೃಂದಾವನ ಸೇವಾರತ ಜನ ಕಲ್ಪಾವನಿಜ ವಂದಿತ ಹಯಮುಖ ಸಾಕ್ಷೀ ಕೃತ ಸುವಿಭವದಾ । ಸುಜನವರ್ಯ ಅಪ್ಪಣಾರ್ಯ ವಿನುತ ರಘುನಾಥವಿತಲ ಪದಧ್ಯಾನ ನಿರತ ಗುರು ॥೫॥

6. ಗುರು ರಾಘವೇಂದ್ರಾ ನೀ ಕರುಣಿಸಿ ನೋಡಬಾರದೆ ॥ಪ॥
ನೊರೆ ಯಾರಿಗಡಲೋ ಹೇ ಕಾರುಣ್ಯ ಶರಧೇ ॥ಅ॥

ಸ್ಮರಿಸಿದವರ ಪೊರೆವೆನೆಂದು ನಿನ್ನ ಬಿರದೇ ಸದಾ ವರ ಶರಣ ಕಲ್ಪತರುವೆ ಎನ್ನ ಯಾಕೆ ಮರಾವೆ ॥೧॥

CC-O. In Public Domain. Digitized by eGangotri

ಕರವ ಮುಗಿದು ನಮಿಸಿ ನಿನಗೆ ಬಾಯದೆರೆದಾ ನಾ ಇದು ಸರಿಯೆ ನಿನ್ನ ಮನಸು ಲೇಶವಾದರು ಮಳುಗಾದೆ ॥೨॥

ನಿರುತ ಎನ್ನವಗುಣಗಳನ ಮನಕೆ ತರಾದೆ ನೀ ಪೊರೆಯೊ **ರಘುನಾಥ ವಿತಲ** ಪ್ರಿಯನೆ ಬಿಡದೆ ॥೩॥

7. ದರುಶನವೆ ಘನ ದುರಿತವನ ದಹನ ॥ಪ॥

ಸಂದರುಶನವೇ ಘನದುರಿತವನದಹನ ಗುರುರಾಘವೇಂದ್ರರ ಚರಣ ನತರ ॥ಸಂ॥೬॥

ಪರನು ಭಕುತಿ ಪುರಸ್ಸರದೊಳಿವರ ಪದ ಸರಸಿಜಧೂಳಿಯ ಧರಿಸಿದವರ ॥ಸಂ॥೧॥

ಭ್ರಮರದಂತೆ ಪದಕಮಲದಿ ಸರ್ವದಾ ವಿಮಲ ಮನವಿರುವ ಸು ಮಹಾಂತರ ॥೨॥

ಶ್ರೀ ರಘುನಾಥವಿತಲಾರಾಧಕ ಗುರು ಸಾರ್ವಭೌಮರ ಗುಣ ಸಾರುತಿಹರ ॥ಸಂ॥೩॥

8. ನಂಬೊ ರಾಘವೇಂದ್ರರಾ ಪಾದವ ॥ಪ॥
ತುಂಬುತಿರುವಘ ಕಳೆವ ॥೮॥
ಸಾಮಗಾನದ ಪ್ರೇಮಿ ಕೃಷ್ಣನ ಧಾಮ ತೋರಿ ನಿಷ್ಕಾಮನೆನಿಸುವ ॥೧॥
ಮೂಕ ಬಧಿರಗೆ ಈ ಕಲಿಯೊಳಾನೇಕ ವಚನವ ತಾ ಕರುಣಿಸುವ ॥೨॥
ಭೂತಾದಿಗಳ ಪ್ರೇತ ಪೀಡೆಯ।ಭೀತಿ ಬಿಡಿಸಿ ಭೂ ಖ್ಯಾತರಾದವರ ॥೩॥
ರಾಮ ಭೃತ್ಯ ಹನುಮ ಭೀಮ ಮಧ್ವಮುನಿಗಳ ಪ್ರೇಮಪಾತ್ರರ ॥೪॥
ದಾಶರಥಿ ಶ್ರೀನಿವಾಸಮೂರ್ತಿಯ ದಾಸರೊಳಗಗ್ರೇಸರಾ ॥೫॥

———

CC-O. In Public Domain. Digitized by eGangotri

ಪೂಜ್ಯಾಯ ರಾಘವೇಂದ್ರಾಯ

ಸತ್ಯಧರ್ಮ ರತಾಯ ಚ

ಭಜತಾಂ ಕಲ್ಪವೃಕ್ಷಾಯ

ನಮತಾಂ ಕಾಮಧೇನವೇ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಕೆಲವು ನಿತ್ಯೋಪಯುಕ್ತ ಪ್ರಕಟಣೆಗಳು

* ಸಂಕಷ್ಟನಾಶನ ಗಣಪತಿ ಸ್ತೋತ್ರ
* ಗಣೇಶದ್ವಾದಶನಾಮ ಸ್ತೋತ್ರ
* ಆದಿತ್ಯಹೃದಯಮ್
* ಶ್ರೀ ಲಕ್ಷ್ಮೀಸ್ತೋತ್ರಮಾಲಿಕೆ
* ಮಹಿಷಾಸುರಮರ್ದಿನೀ ಸ್ತೋತ್ರ
* ಶ್ರೀ ರಾಘವೇಂದ್ರ ಸ್ತೋತ್ರ
* ಅಷ್ಟಲಕ್ಷ್ಮೀ ಸ್ತೋತ್ರ
* ವೇಂಕಟೇಶ ಸುಪ್ರಭಾತಮ್
* ಯಮ ಸ್ತೋತ್ರಂ
* ಸುದರ್ಶನ ಅಷ್ಟೋತ್ತರ
* ಹನುಮ ಸುಪ್ರಭಾತ
* ಕೇಶವನಾಮ
* ಭಜನಮಂಜರಿ
* ಕುಬೇರ ಪೂಜಾ ವಿಧಾನ
* ಶ್ರೀ ಸಂತೋಷೀಮಾತಾ
* ಶ್ರೀ ದೇವೀಸ್ತೋತ್ರಮಾಲಾ
* ಶ್ರೀ ಗಣಪತಿ ಸಹಸ್ರನಾಮ
* ಶ್ರೀ ಶಿವ ಸಹಸ್ರನಾಮ
* ಶ್ರೀ ಸುಬ್ರಹ್ಮಣ್ಯ ಸಹಸ್ರನಾಮ
* ಶ್ರೀರಾಮ ಸಹಸ್ರನಾಮ
* ಶ್ರೀ ವೇಂಕಟೇಶ ಸಹಸ್ರನಾಮ
* ಶ್ರೀ ವಿಷ್ಣು ಸಹಸ್ರನಾಮ
* ಶ್ರೀ ನೃಸಿಂಹ ಸಹಸ್ರನಾಮ
* ಶ್ರೀ ರಾಘವೇಂದ್ರ ಸಹಸ್ರನಾಮ
* ಶ್ರೀ ಲಲಿತಾ ಸಹಸ್ರನಾಮ
* ಶ್ರೀ ಲಕ್ಷ್ಮೀ ಸಹಸ್ರನಾಮ
* ಶ್ರೀ ದುರ್ಗಾ ಸಹಸ್ರನಾಮ
* ಶ್ರೀ ಸರಸ್ವತೀ ಸಹಸ್ರನಾಮ
* ಶ್ರೀ ಲಕ್ಷ್ಮೀ ಹೃದಯಮ್
* ತ್ರಿಚಕಲ್ಪ ಸೂರ್ಯನಮಸ್ಕಾರ
* ನವಗ್ರಹ ಜಪವಿಧಿ
* ಸ್ವಸ್ತಿಪುಣ್ಯಾಹವಾಚನ

Sri Vidyabharathi Book Centre, Sringeri

Sri Raghavendra Mahima Stotragalu - 1988 Rs. 2-00